ಧಾರವಾಡ ಜಿಲ್ಲೆಗೆ ಪ್ರೌಢಶಾಲೆಗಳನ್ನು ಮಂಜೂರು ಮಾಡುವುದು

2140 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸ ಪ್ರೌಢಶಾಲೆಯ ಮಂಜೂರಾತಿಗಾಗಿ ಧಾರವಾಡ ಜಿಲ್ಲಾ ಪರಿಷತ್ತಿನ ಶಿಫಾರಸ್ಸು ಪಡೆದು ಸರ್ಕಾರಕ್ಕೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು? (ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಹೆಸರು ಹಾಗೂ ವಿವರಗಳನ್ನು ನೀಡುವುದು)

ಆ) ಇವುಗಳ ಪೈಕಿ ಎಷ್ಟು ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ (ಶಿಕ್ಷಣ ಸಂಸ್ಥೆಗಳ ಹೆಸರುಗಳನ್ನು ನೀಡುವುದು)

ಇ) ಇವುಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಂಸ್ಥೆಗಳಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ವಿವರಗಳನ್ನು ಒದಗಿಸುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು)

ಅ) 1989-90 : 43

1990-91 : 18

1991-92 : 55

116

ಆ) 1) ಶ್ರೀ ಮಡಿವಾಳ ಮಾಜಿದೇವ ವಿದ್ಯಾ ಸಂಸ್ಥೆ (ರಿ) ರೋಣ ಗದಗ ತಾಲ್ಲೂಕು ದಾರವಾಡ ಜಿಲ್ಲೆ.

2) ಮಹಾಲಕ್ಷ್ಮಿ ಎಜುಕೇಷನ್ ಟ್ರಸ್ಟ್ (ರಿ), ರಟ್ಟಿಹಳ್ಳಿ, ರಾಣೆಬೆನ್ನೂರು ತಾಲ್ಲೂಕು, ದಾರವಾಡ ಜಿಲ್ಲೆ.

3) ಶ್ರೀ ಮಾಲತೇಶ ವಿದ್ಯಾವರ್ಧಕ ಸಂಘ (ರಿ) ಹಾನಗಲ್ ತಾಲ್ಲೂಕು, ದಾರವಾಡ ಜಿಲ್ಲೆ.

4) ಶ್ರೀ ಅಬ್ದುಲ್ ನಜೀರ್ ಸಾಬ್ ವಿದ್ಯಾ ಸಂಸ್ಥೆ (ರಿ), ಹಿರೇಬೂದಿಹಾಳ್, ಹಿರೇಕೆರೂರ್ ತಾಲ್ಲೂಕು, ದಾರವಾಡ ಜಿಲ್ಲೆ.

5) ಶ್ರೀ ಚನ್ನಬಸವೇಶ್ವರ ಗ್ರಾಮೀಣ ಸಂಸ್ಥೆ (ರಿ), ಶಿಗ್ಗಾಂವಿ. ದಾರವಾಡ ಜಿಲ್ಲೆ.

6) ನವೋದಯ ವಿದ್ಯಾ ಸಮಿತಿ ಬನ್ನೂರು, ಶಿಗ್ಗಾಂವ್ ತಾಲ್ಲೂಕು, ದಾರವಾಡ ಜಿಲ್ಲೆ.

ಇ)	*1989-90*	*1990-91*	*1991-92*
ಪರಿಶಿಷ್ಟಜಾತಿ	19	10	24
ಪರಿಶಿಷ್ಟ ಪಂಗಡ	02	02	02
	21	12	26

ಚಿಂತಾಮಣಿ ತಾಲ್ಲೂಕಿನಲ್ಲಿ ಟ್ರಾನ್ಸ್ಫಾರ್ಮರ್ ಸ್ಥಾಪನೆ

2293 - ಶ್ರೀ ಬೌಡರೆಡ್ಡಿ (ಚಿಂತಾಮಣಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಬಟ್ಲಹಳ್ಳಿ ಯನಮಲವಾಡಿಗೆ ಹೋಗುವ ರಸ್ತೆ ಮುಂಗಾನಹಳ್ಳಿ ಗ್ರಾಮದ ಪ್ರವೇಶ ಸ್ಥಳದ ಪಕ್ಕದಲ್ಲಿ ಒಂದು ಟ್ರಾನ್ಸ್ಫಾರ್ಮರ್ ಹಾಕಿರುವುದು ನಿಜವೇ?